ದಿನಾಂಕ 20-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ VCMP ವಕೀಲರಿಂದ**

ಅಪಘಾತವಾದಾಗ ನನಗೆ 22 ವರ್ಷ ವಯಸ್ಸಾಗಿತ್ತು. ಅಪಘಾತದ ಸಮಯದಲ್ಲಿ ನನಗೆ 35 ವರ್ಷ ವಯಸ್ಸಿಗಿಂತಲೂ ಹೆಚ್ಚಿಗೆ ವಯಸ್ಸಾಗಿದ್ದರೂ 22 ವರ್ಷ ವಯಸ್ಸಾಗಿತ್ತು ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ವಯಸ್ಸನ್ನು ತೋರಿಸುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತದ ಪೂರ್ವದಲ್ಲಿ ಆಟೋ ಚಲಾಯಿಸುತ್ತಿದ್ದೆ. ಸದರಿ ಆಟೋವು ನನ್ನ ಸ್ವಂತದ್ದಾಗಿತ್ತು. ನನಗೆ ಆಟೋ ಚಾಲನೆ ಮಾಡಲು ವಾಹನ ಪರವಾನಿಗೆ ಪತ್ರ ಇದೆ ನನ್ನ ವಾಹನ ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿಲ್ಲ ನಾನು ಆಟೊ ನಡೆಸುತ್ತಿರಲಿಲ್ಲ ಆದಕಾರಣ ವಾಹನ ಚಾಲನಾ ಪರವಾನಿಗೆ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ

ನನಗೆ ಮಾಸಿಕ ರೂ.25000/- ಆದಾಯವಿದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಾನು ಸಲ್ಲಿಸಿದ್ದೇನೋ ಇಲ್ಲವೋ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನನಗೆ ರೂ.25000/- ಆದಾಯ ಇರದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ದಿನದಂದು ಮದ್ದರಕಿ ಗ್ರಾಮದಿಂದ ವಾಪಾಸು ಅವರಾದ ಗ್ರಾಮಕ್ಕೆ ದ್ವಿ-ಚಕ್ರ ವಾಹನದ ಮೇಲೆ ಬರುತ್ತಿದ್ದೆ. ಸದರಿ ದ್ವಿ-ಚಕ್ರ ವಾಹನವನ್ನು ನನ್ನ ಅಣ್ಣನ ಸ್ನೇಹಿತನಾದ ಸಂಗಪ್ಪ ತಂದೆ ಹಣಮಂತ ಭಜಂತ್ರಿ ನಡೆಸುತ್ತಿದ್ದ. ಸದರಿ ಸಂಗಪ್ಪ ಭಜಂತ್ರಿ ವಾಹನ ಚಾಲನಾ ಪರವಾನಿಗೆ ಪತ್ರ ಹೊಂದಿದ್ದ. ಆತನ ವಾಹನ ಚಾಲನಾ ಪರವಾನಿಗೆ ಪತ್ರ ಕೋರ್ಟಿಗೆ ಹಾಜರುಪಡಿಸಿರುತ್ತೇನೆ ಸದರಿ ಸಂಗಪ್ಪ ಭಜಂತ್ರಿ ವಾಹನ ಚಾಲನಾ ಪರವಾನಿಗೆ ಪತ್ರವನ್ನು ಕೋರ್ಟಿಗೆ ಹಾಜರುಪಡಿದೇ ಇದ್ದರೂ ಸಹ ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನು ಹೆಲ್ಮೇಟ್ ಧರಿಸಿರಲಿಲ್ಲ ಆದರೆ ಸಂಗಪ್ಪ ಭಜಂತ್ರಿ ಹೆಲ್ಮೇಟ್ ಧರಿಸಿದ್ದರೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ಸಂಗಪ್ಪ ಭಜಂತ್ರಿ ಅಪಘಾತದ ಸಮಯದಲ್ಲಿ ಹೆಲ್ಮೇಟನ್ನು ಧರಿಸಿದ ಬಗ್ಗೆ ಪೊಲೀಸ್ ದಾಖಲಾತಿಯಲ್ಲಿ ಎಲ್ಲಿಯೂ ಬಂದಿಲ್ಲ ಎಂದರೆ ನನಗೆ ಅಷ್ಟೊಂದು ಗೊತ್ತಿಲ್ಲ.

ಸಂಗಪ್ಪ ಭಜಂತ್ರಿ ದ್ವಿ-ಚಕ್ರ ವಾಹನವನ್ನು ವೇಗವಾಗಿ ಚಾಲನೆ ಮಾಡುತ್ತಿದ್ದು ನಾಯಿ ಅಡ್ಡಬಂದ ಕಾರಣ ಸದರಿ ನಾಯಿ ಮೇಲೆ ವಾಹನವನ್ನು ಹೋಗುವುದನ್ನು ತಪ್ಪಿಸಲು ಒಮ್ಮೆಲೆ ಬ್ರೇಕ್ ಹಾಕಿ ಸ್ಕಿಡ್ ಆದ ಕಾರಣ ಅಪಘಾತವಾಗಿರುತ್ತದೆ. ನಾಯಿ ಅಡ್ಡಬಂದ ಕಾರಣ ಸದರಿ ನಾಯಿ ಮೇಲೆ ವಾಹನವನ್ನು ಹೋಗುವುದನ್ನು ತಪ್ಪಿಸಲು ಒಮ್ಮೆಲೆ ಬ್ರೇಕ್ ಹಾಕಿ ಸ್ಕಿಡ್ ಆದ ಕಾರಣ ಅಪಘಾತವಾಗಿರುತ್ತದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಸಂಗಪ್ಪ ಭಜಂತ್ರಿರವರ ತಪ್ಪಿನಿಂದ

ಅಪಘಾತವಾಗಿರುತ್ತದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಅಪಘಾತದಲ್ಲಿ ನನ್ನ ಹಲ್ಲುಗಳು ಉದುರಿದ್ದು ಹಾಗೂ ಗದ್ದ ಸೀಳಿದ ಕಾರಣ ಶಸ್ತ್ರಚಿಕಿತ್ಸೆ ಮಾಡಲಾಗಿರುತ್ತದೆ. ನನ್ನ ಗಾಯದ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ ನಾನು ಜೇವರ್ಗಿಯ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಕಲ್ಬುರ್ಗಿಯ ಕಾಮರೆಡ್ಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಗಾಯದ ಪ್ರಮಾಣ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸದೇ ಇದ್ದರೂ ಸಹ ನಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕಾಮರೆಡ್ಡಿ ಆಸ್ಪತ್ರೆಯಲ್ಲಿ ನಾನು 10 ದಿನಗಳ ಕಾಲ ಇದ್ದೆ.

ಅಪಘಾತದ ವಿಚಾರವಾಗಿ ಪೊಲೀಸರಿಗೆ ದೂರನ್ನು ನಾನೇ ಸಲ್ಲಿಸಿರುತ್ತೇನೆ. ದೂರನ್ನು ಅಪಘಾತವಾದ ಮರುದಿನ ನಾನೇ ನೀಡಿರುತ್ತೇನೆ. ನಾನು ಶಾಲೆ ಕಲಿತಿಲ್ಲ. ನಿಪಿ-1 ರ ದೂರನ್ನು ಅಪಘಾತವಾದ 2 ದಿನಗಳ ನಂತರ ನೀಡಿರುತ್ತೇನೆಂದರೆ ಸಾಕ್ಷಿ ನಾನು ಅಪಘಾತವಾದ ಮರುದಿನವೇ ದೂರನ್ನು ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಅಪಘಾತವಾದ ಮರುದಿನವೇ ದೂರನ್ನು ನೀಡಿದ ಬಗ್ಗೆ  ಯಾವುದೇ ದಾಖಲಾತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಚಿಕಿತ್ಸೆ ಪಡೆದು ಮನೆಯಲ್ಲಿ ವಿಚಾರ ಮಾಡಿದ ನಂತರ ದೂರನ್ನು ನೀಡಿದ್ದರಿಂದ ವಿಳಂಬ ಆಗಿರುತ್ತದೆ ಅಂತಾ ದೂರಿನಲ್ಲೇ ನಮೂದಾಗಿದೆ ಎಂದರೆ ಸರಿಯಲ್ಲ.

ವಾಹನ ನಂ.ಕೆಎ-32 ಇಡಬ್ಲ್ಯು-7363 ವಾಹನದಿಂದ ಯಾವುದೇ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಸದರಿ ವಾಹನದ ಮಾಲೀಕ ಹಾಗೂ ಚಾಲಕ ಚರ್ಚೆ ಮಾಡಿ ಸದರಿ ವಾಹನವನ್ನು ಅಪಘಾತವಾದ 2 ದಿನಗಳ ನಂತರ ಪ್ರಕರಣದಲ್ಲಿ ಸೇರಿಸಿರುತ್ತೇವೆಂದರೆ ಸರಿಯಲ್ಲ. ಪರಿಹಾರ ಧನ ಪಡೆಯುವ ಉದ್ದೇಶದಿಂದ ವಾಹನ ನಂ.ಕೆಎ-32 ಇಡಬ್ಲ್ಯು-7363 ರ ಮೇಲೆ ಸುಳ್ಳು ಪ್ರಕರಣ ಸಲ್ಲಿಸಿರುತ್ತೇವೆಂದರೆ ಸರಿಯಲ್ಲ.

ನನಗೆ ಕಾಮರೆಡ್ಡಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಲಾಗಿರುತ್ತದೆ. ನಿಪಿ-9 ರ ದಾಖಲೆ ರಸೀದಿ ಆಗಿದ್ದು ಯಾವುದೆ ಬಿಲ್ಲು ಅಲ್ಲ ಎಂದರೆ ಸರಿಯಲ್ಲ. ನಿಪಿ-9 ರ ದಾಖಲೆಯನ್ನು ನನಗೆ ಬೇಕಾದ ಹಾಗೆ ಬರೆಯಿಸಿಕೊಂಡು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಆಸ್ಪತ್ರೆಯವರು ಸಾಮಾನ್ಯವಾಗಿ ಗಣಕೀಕೃತ ಬಿಲ್ಲುಗಳನ್ನು ನೀಡುತ್ತಿದ್ದು ನಿಪಿ-9 ರ ರೀತಿಯ ರಸೀದಿಯನ್ನು ನೀಡುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹೆಚ್ಚಿಗೆ ಪರಿಹಾರ ಧನ ಸಿಗಲೆಂದು ಆಸ್ಪತ್ರೆ ಬಿಲ್ ಹಾಗೂ ವೈದ್ಯಕೀಯ ಬಿಲ್ ಸೃಷ್ಠಿಸಿಕೊಂಡು ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದರೆ ಸರಿಯಲ್ಲ. ನನಗೆ ಕೆಲಸ ಮಾಡಲು ಬರುತ್ತಿಲ್ಲ ಅಂತಾ ಯಾವುದೇ ದಾಖಲೆ ಹಾಗೂ ಅಂಗನ್ಯೂನ್ಯತೆ ಪ್ರಮಾಣ ಪತ್ರ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ ನಾನು ಕೇಳಿದ ಪರಿಹಾರದ ಹಣಕ್ಕೆ ಯಾವುದೇ ಆಧಾರ ಇಲ್ಲ ಅಂದಾಜಿನ ಮೇಲೆ ಕೇಳಿರುತ್ತೇನೆಂದರೆ ಸರಿಯಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಠಿಸಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಜೇವರ್ಗಿ